ಅದಕ್ಕಾಗಿ ನಾವು ನಿಮಗೆ ಕೃತಜ್ಞರಾಗಿರಬೇಕೆಂದು ಇಂಗ್ಲಿಷ್ ಅಧ್ಯಾಪಕರು ಆಗಾಗ ಹೇಳುತ್ತಿದ್ದುದು ನೆನಪಿದೆಯೇ?"

"ಹೌದು ನೆನಪಿದೆ."

"ನನಗೆ ಚೆನ್ನಾಗಿ ನೆನಪಿದೆ. ಯಾಕೆ ಗೊತ್ತಾ ಮಂದಾಕಿನಿ? ನಾನು ಮೂರು ಹೊತ್ತು ಹೊಟ್ಟೆ ತುಂಬಾ ಊಟ ಮಾಡಲಾಗದ ಕುಟುಂಬದಿಂದ ಬಂದವನು. ಆಗ ನಾನೊಂದು ಕನಸು ಕಂಡೆ."

"ಏನು ಕನಸು?"

"ಹೇಳಿದರೆ ನೀವು ಬಯ್ಯಲ್ಲ ತಾನೆ?"

"ನೀವು ಐವತ್ತು ವರ್ಷಗಳ ಹಿಂದೆ ಕಂಡ ಕನಸಿಗೆ ನಾನ್ಯಾಕೆ ಈಗ ಬಯ್ಯಲಿ?"

"ನಿಮ್ಮನ್ನು ಮದುವೆಯಾಗುವ ಕನಸು."

ಗೌಡ್ತಿ ಅಮ್ಮ ಸಣ್ಣಗೆ ನಕ್ಕರು.

"ಆಗಲಿ. ಆದರೆ ನನ್ನನ್ನೇ ಯಾಕೆ?"

"ಯಾಕೆಂದರೆ ಮೂರು ಹೊತ್ತು ಹೊಟ್ಟೆ ತುಂಬಾ ಊಟ ಮಾಡಲು. ಯಾಕೆಂದರೆ ಚಂದದ ಪ್ಯಾಂಟು, ಶರ್ಟು, ಬೂಟು ಹಾಕಿಕೊಳ್ಳಲು. ಯಾಕೆಂದರೆ ನಿಮ್ಮೊಡನೆ ಚವರ್ಲೈಟ್ ಕಾರಲ್ಲಿ ಇಡೀ ಕರ್ನಾಟಕ ಸುತ್ತಲು. ಯಾಕೆಂದರೆ ಬಡತನದ ಕೀಳರಿಮೆಯಿಂದ ದಿನಾ ಸಾಯುತ್ತಿರುವ ನನ್ನನ್ನು ಹೇಗಾದರೂ ಬದುಕಿಸಿಕೊಳ್ಳಲು."

ಗೌಡ್ತಿ ಅಮ್ಮನಿಗೆ ತೀವ್ರ ವಿಷಾದವಾಗಿ ಮೌನ ತಾಳಿದರು.

"ಮಂದಾಕಿನಿ, ಯಾಕೆ ಮಾತಾಡುತ್ತಿಲ್ಲ."

"ಏನು ಮಾತಾಡ್ಲಿ ದೀಪಕ್? ನಿಮಗೆ ಅಷ್ಟೊಂದು ಇಷ್ಟ ಇದ್ದಿದ್ರೆ ನನ್ನಪ್ಪನಲ್ಲಿ ಕೇಳಬಹುದಿತ್ತಲ್ಲಾ?"

"ಹೊಟ್ಟೆಗೆ ಸರಿಯಾಗಿ ಊಟ, ತೊಡಲು ಸರಿಯಾದ ಬಟ್ಟೆ, ಇರಲೊಂದು ಸ್ವಂತ ಮನೆಯಿಲ್ಲದ ಹದಿನಾರರ ಅಬ್ಬೇಪಾರಿ, ನಿಮ್ಮಂತಹ ಬಾಯಲ್ಲಿ ಚಿನ್ನದ ಚಮಚ ಇಟ್ಟುಕೊಂಡೇ ಹುಟ್ಟಿದವರನ್ನು ಎಲ್ಲಾದರೂ ಬಯಸುವುದುಂಟಾ? ಹದಿನಾರರ ಹರೆಯದಲ್ಲಿ ವಿವಾಹವಾಗುವುದುಂಟಾ? ಅಸಲಿಗೆ, ನಿಮ್ಮ ತಂದೆಯವರೆದುರು ನಿಲ್ಲುವ ಧೈರ್ಯವಾದರೂ ಆಗ ನನ್ನಲ್ಲಿರಲು ಸಾಧ್ಯವೇ? ನಿಮ್ಮ ತಂದೆ ನನ್ನನ್ನು ಕೋವಿಯಿಂದ ಸುಟ್ಟು ನಿಮ್ಮ ಎಸ್ಟೇಟಿನಲ್ಲಿ ಹೂತು ಮೇಲೆ ಕಾಫಿ ಗಿಡ ನೆಡುತ್ತಿದ್ರು."

"ಮತ್ತೇನಾಯಿತು?"

"ನಾನು ಉಜಿರೆಯಲ್ಲಿ ಬಿ.ಎ. ಮಾಡುವಾಗ ನೀವು ಜ್ಯೋತಿನಿವಾಸ್‌ನಲ್ಲಿ ಕಲಿಯುತ್ತಿದ್ರಿ. ಅದು ಹೇಗೋ ನಿಮ್ಮ ವಿಳಾಸ ಕಂಡು ಹಿಡಿದು ಒಂದು ಪತ್ರ ಬರೆದೆ. ನೀವದಕ್ಕೆ ಉತ್ತರಿಸಿದಿರಿ. ಇನ್ನೊಂದು ಪತ್ರ ಬರೆದೆ. ಅದಕ್ಕೆ ನೀವು, "ಕತೆ ಕವನಗಳನ್ನು ಬರೆಯುತ್ತಿರುವ ಮಿತ್ರ ದೀಪಕ್, ನೀವು ದೊಡ್ಡ ಸಾಹಿತಿಯಾಗಿ ಹೆಸರು ಗಳಿಸಿ. ಇನ್ನೆರಡು ತಿಂಗಳಲ್ಲಿ ನನ್ನ ಮದುವೆ. ಆದುದರಿಂದ ಇದು ನನ್ನ ಕೊನೆ ಪತ್ರ – ಎಂದು ಉತ್ತರ ಬರೆದಿರಿ. ಅಲ್ಲಿಗೆ ಸಂಪರ್ಕ ನಿಂತುಹೋಯ್ತು."

"ಈಗ ನೀವು ಎಲ್ಲಿದ್ದೀರಿ? ಏನ್ಮಾಡ್ತೀರಿ?"

"ನಾನು ಸುಳ್ಯ ಕಾಲೇಜಿನಲ್ಲಿ ಅಧ್ಯಾಪಕನಾಗಿ ಕೊನೆಗೆ ಪ್ರಿನ್ಸಿಪಾಲಾಗಿ ರಿಟಾಯರ್ ಆದೆ. ನೀವು ನಂಬ್ತಿರೋ ಇಲ್ವೋ? ಇನ್ನೂರಕ್ಕಿಂತ ಹೆಚ್ಚು ಪುಸ್ತಕ ಬರೆದೆ. ರಿಟಾಯರ್ ಆದ ಮೇಲೆ ಡಿಪ್ರೆಷನ್ ಆಗಿ ಉನ್ಮಾದಕ್ಕೆ ತಿರುಗಿತು. ನನಗೆ ದೇವತೆಯಂತಾ ಹೆಂಡತಿ ಸಿಕ್ಕಿದ್ದಾಳೆ. ಅವಳ ಪ್ರಯತ್ನ ಇಲ್ಲದಿದ್ದರೆ ನಾನು ಎಂದೋ ಸತ್ತೇ ಹೋಗುತ್ತಿದ್ದೆ ನಿಮ್ಮ ವಿಷಯ ಏನು?"

ಗೌಡ್ತಿ ಅಮ್ಮ ನಿಡುಸುಯ್ದರು.

"ಏನು ಹೇಳೋದು ದೀಪಕ್? ಇಪ್ಪತ್ತೊಂದು ತುಂಬುವ ಮೊದಲೇ ಮದ್ವೆಯಾಯಿತು. ನನಗೆ